**2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

| Spl. Case No. | 65/2013 |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | ದೀಪಕ್ | |
| ತಂದೆಯ ಹೆಸರು | ಆಂಜಿನೆಪ್ಪ | ಸಾಕ್ಷಿಗೆ ದಿಃ 03.10.2023 ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 38 ವರ್ಷ | |
| ಉದ್ಯೋಗ | ಚಾಲಕ | PW -5 |
| ವಾಸ ಸ್ಥಳ | ದೊಡ್ಡಕಲ್ಲಸಂದ್ರ, ಬೆಂಗಳೂರು ಗ್ರಾಮಾಂತರ | CW- 1 |

**ಮುಖ್ಯ ವಿಚಾರಣೆ ಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ಪರಿಶಿಷ್ಟ ಪಂಗಡದ ನಾಯಕ ಜಾತಿಗೆ ಸೇರಿದವನಿರುತ್ತೇನೆ. ನಾನು ಚಾಸಾ-5 ಆಶಾ ಇವರನ್ನು ಪ್ರೀತಿಸಿ ಮದುವೆಯಾಗಿರುತ್ತೇನೆ. ನಾನು ಅಂದಾಜು 17-18 ವರ್ಷದ ಹಿಂದೆ ಮದುವೆ ಆಗಿರುತ್ತೇನೆ. ಆರೋಪಿತರು ಚಾಸಾ-5 ಆಶಾ ಇವರ ಸಂಬಂಧಿಕರು ಇರುತ್ತಾರೆ. ಆರೋಪಿತರು ಕುರುಬ ಜಾತಿಗೆ ಸೇರಿದವರು ಇರುತ್ತಾರೆ.

2. ನಾನು ಆಶಾಳನ್ನು ಮದುವೆ ಆದಾಗಿನಿಂದ ಆರೋಪಿತರು ಸಾಕಷ್ಟು ಸಲ ನನ್ನೊಂದಿಗೆ ಜಗಳವಾಡಿದ್ದಾರೆ. ದಿಃ02.09.2012 ರಂದು ಸಾಯಾಂಕಾಲ 05.15 ಘಂಟೆಗೆ ನಾನು ತಲಘಟ್ಟಪುರದ ಎಂ.ಎಸ್.ವೈನ್ಸ್ ಸ್ಟೋರ್ ಬಳಿ ನಿಂತಾಗ ನನ್ನ ಜೊತೆ ಕುಮಾರ ಮತ್ತು ಚಂದ್ರು ಇದ್ದರು. ಆ ಸಮಯಕ್ಕೆ ಆರೋಪಿ ನಂ.1 ಅನೀಲ್ ಈತನು ಟಾಟಾ ಸುಮೋದಲ್ಲಿ ನಾವು ನಿಂತ ಸ್ಥಳಕ್ಕೆ ಬಂದು ನನ್ನನ್ನು ನೋಡಿಕೊಂಡು ಹೋದನು. ನಂತರ ಆರೋಪಿ ಗೋಪಿ, ನವೀನ್ ಮತ್ತು

ಸಂಪನ್ನಪ್ಪ ಇವರೊಂದಿಗೆ ಮತ್ತು ಇನ್ನೊಬ್ಬ ಆರೋಪಿಯೊಂದಿಗೆ 1 ನೇ ಆರೋಪಿ ಅನೀಲ್ ಬಂದನು. ಏಕಾಏಕಿ ನನ್ನ ಹಲ್ಲೆ ಮಾಡಿದರು.

3. 1 ನೇ ಆರೋಪಿ ಅನೀಲ್ ನನ್ನ ತಲೆಗೆ ದೊಣ್ಣೆಯಿಂದ ಹೊಡೆದನು. ಆದ್ದರಿಂದ ನನ್ನ ತಲೆಗೆ ಗಾಯವಾಗಿ ರಕ್ತ ಸೋರುತ್ತಿತ್ತು. ಆರೋಪಿ ಗೋಪಿ ಈತನು ಬಿಯರ್ ಬಾಟಲಿಯಿಂದ ನನ್ನ ಎಡ ಕುತ್ತಿಗೆಗೆ ಹೊಡೆದನು. ಆದ್ದರಿಂದ ನನ್ನ ಎಡ ಕುತ್ತಿಗೆ ಕುಯ್ದು ಗಾಯವಾಯಿತು. ಸಾಕ್ಷಿ ಬಿಯರ್ ಬಾಟಲಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವು ಈಗಾಗಲೇ ಮು.ಮಾ-1 ಎಂದು ಗುರ್ತಾಗಿರುತ್ತವೆ. ಆರೋಪಿ ಸಂಪಂಗಿ ಈತನು ಕೈಯಿಂದ ನನ್ನ ಕಣ್ಣಿಗೆ ಹೊಡೆದನು. ಆರೋಪಿ ನವೀನ್ ಈತನು ದೊಣ್ಣೆಯಿಂದ ನನ್ನ ಕೈ ಮತ್ತು ಬೆನ್ನಿಗೆ ಹೊಡೆದನು. ಇನ್ನೊಬ್ಬ ಆರೋಪಿ ನನ್ನ ಎರಡೂ ಕೈ ಹಿಡಿದುಕೊಂಡಿದ್ದನು. ಸದರಿ ಆರೋಪಿಯ ಹೆಸರು ಮತ್ತು ವಿಳಾಸ ನನಗೆ ಗೊತ್ತಿಲ್ಲ.

4. ಆರೋಪಿತರು ನನಗೆ ಹಲ್ಲೆ ಮಾಡಿದಾಗ ಸಂಜೆ 05.30 ಘಂಟೆ ಆಗಿತ್ತು. ಘಟನೆಯನ್ನು ಚಾಸಾ-2 ಮತ್ತು 3 ನೋಡಿರುತ್ತಾರೆ. ನಂತರ ನಾನು ಸಿದ್ದಲಿಂಗಪ್ಪ ಮೆಮೋರಿಯಲ್ ಆಸ್ಪತ್ರೆಗೆ ಹೋಗಿ ದಾಖಲಾಗಿ ಚಿಕಿತ್ಸೆ ಪಡೆದನು. ನಂತರ ಪೋಲಿಸರು ಆಸ್ಪತ್ರೆಗೆ ಬಂದು ನನ್ನ ಫಿರ್ಯಾದಿಯ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಫಿರ್ಯಾದಿ ಹೇಳಿಕೆ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಫಿರ್ಯಾದಿಯನ್ನು ನಿಶಾನೆ ಪಿ-4 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-4(ಎ) ಎಂದು ಗುರ್ತಿಸಲಾಯಿತು. 1 ನೇ ಆರೋಪಿ ಸ್ಥಳಕ್ಕೆ ಬಂದ ಟಾಟಾ ಸುಮೋ ವಾಹನವನ್ನು ನೋಡಿದರೆ ಗುರ್ತಿಸುತ್ತೇನೆ. ನಂತರ ಪೋಲಿಸರು ನನ್ನ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಜೆಸಿಕೆರವರಿಂದಃ**

5. ಆರೋಪಿ ಪರ ವಕೀಲರು ಗೈರು ಹಾಜರು. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.